

'ಹೊಟ್ಟೆ ಹಸೀತಿದೆಯಾ?'

ತನ್ನ ಮಾತಿಗೆ ತಾನು ಪ್ರಶ್ನೆಯೇ ಕೇಳಿಲ್ಲ ಎಂಬಂತೆ ಟೀವಿಯಲ್ಲಿ ಹುದುಗಿಹೋದ ಗಂಡನ ಕ್ರಾಪಿನಲ್ಲಿ ಕೈಯಾಡಿಸಿ, ಮೊಮ್ಮಗಳ ಕ್ಯಾರಿಯರ್ ರೆಡಿ ಮಾಡಿ ಬ್ಯಾಗಿಗೆ ಸೇರಿಸಿ, 'ಬಾ ಬಾ... ವ್ಯಾನ್ ಬರುವ ಹೊತ್ತಾಯಿತು' ಎಂದು ಮನೆಗೆ ಬೀಗ ತಗುಲಿಸಿ, ಅಪಾರ್ಟ್‌ಮೆಂಟಿನ ಆಚೆ ರೋಡಲ್ಲಿ ಬರುವ ವ್ಯಾನಿಗೆ ಮೊಮ್ಮಗಳಿಗೆ ಕೈಬೀಸಿ ಬರುವಾಗ, 'ಎಷ್ಟು ಸಾರ್ಥಕ್ಯ ಅಲ್ಲವಾ ಈ ಕೆಲಸ?' ಮತ್ತೊಬ್ಬ ಅಜ್ಜಿಯ ಮಾತು.

'ಮುಖದ ಮೇಲೆ ದೂಳು ಕೂತಿತ್ತು, ಜೀವನ ಪೂರ್ತಿ ಕನ್ನಡಿ ಸ್ವಚ್ಛ ಮಾಡ್ತಾನೆ ಇದ್ದೇನೆ – ಸಂತರ ವಾಣಿಯಿದು' ಎಂದ ಅವಳ ಮಾತಿಗೆ ಕ್ಷಣ ಏನೂ ತಿಳಿಯದಂತೆ ಕತ್ತಾಡಿಸಿತು ಅಜ್ಜಿ. 'ಗಂಡನ ವಯಸ್ಸು ಹೆಂಡತಿಗಿಂತ ಚಿಕ್ಕದಿರಬೇಕು ಅಂತ ಯಾವನು ಮಾಡಿದ್ನೋ' ಗುಂಡಿನಂತೆ ಪ್ರಶ್ನೆ ಭಾಗೀರತಿಯದ್ದು.

ಮೊಮ್ಮಕ್ಕಳನ್ನು ಬಿಡಲು ಬಂದ ನಾಲ್ಕೈದು ಅಜ್ಜಿಗಳು ದಿನನಿತ್ಯದ ತಮ್ಮ ಗೋಳನ್ನು ಹೀಗೆ ಕಕ್ಕಿಕೊಳ್ಳುವುದು ಅಲ್ಲಿ ಸಾಮಾನ್ಯ. 'ಯಾಕೆ?', 'ಇನ್ನೇನು ಇವರ ಸೇವೆ ಮಾಡೋದ್ರಲ್ಲೇ ನಮ್ಮ ಜನ್ಮ ಮುಗೀತು', 'ಪತಿಯೇ ಪರದೈವ ಅಲ್ಲವೇ?', 'ಅದು ಹೌದು, ಅವರ ಆಯುಷ್ಯ ಚೆನ್ನಾಗಿರಲಿ ಅಂತ ಕೇಳಿ ಕೇಳಿ ನಾವು ಸವೀತಿದ್ದೀವಿ' ಮತ್ತೊಬ್ಬರ ದನಿ. 'ಅಯ್ಯೋ... ನಾನು ಬರ್ತೀನಿ, ನಮಗೆ ವಟು ಸಾವಿತ್ರಿ ವ್ರತ ಇವತ್ತು' ಎಂದು ಕಲಾ ತನ್ನ ಮಗನನ್ನು ವ್ಯಾನ್ ಹತ್ತಿಸಿ ಹೊರಟಳು.

'ಬೆಳಕಿಗೆ ಕಲ್ಲು ತೂರಿ ಕತ್ತಲಲ್ಲುಳಿದವನು ನೀನು, ಪ್ರಯಾಣ ಮಾಡುತ್ತಿದ್ದ ಬಾಳಿನ ನಾವೆಗೆ ರಂಧ್ರಗಳ ಕೊರೆದುಕೊಂಡು ಮುಳುಗಿ ಮತ್ತೆ ತೇಲಿದವನು ನೀನಲ್ಲವೇ ಗಾಲಿಬ್'. ಕೆಲವು ದಿನಗಳಿಂದ ಇದನ್ನು ಅದೆಷ್ಟು ಸಾವಿರ ಬಾರಿ ಓದಿದ್ದಾಳೋ ಸುಮತಿ. ಗಾಲಿಬ್‌ರ ಈ ಮಾತು ತನ್ನ ಬದುಕಿಗೆ ಅನ್ವಯಿಸಿಕೊಳ್ಳಬಹುದೇ? ಮತ್ತದೇ ಚಿಂತೆ.

'ಮೌತ್ ಸೇ ಪಹಲೆ ಆದ್ಮಿ ಗಮ್ ಸೇ ನಿಜಾತ್ ಪಾಯೆ ಕ್ಯಾ'– ಗಾಲಿಬ್‌ರ ಈ ಗಜಲ್‌ನ್ನು ಪದೇ ಪದೇ ಗೊಣಗಿಕೊಳ್ಳುತ್ತಲೇ ಸುಮತಿ ಒಂದು ದೃಢ ನಿರ್ಧಾರಕ್ಕೆ ಬಂದವಳಂತೆ, ಅಂದು ಶನಿವಾರ ಕಾಫಿ ಹೀರುತ್ತ ಮಗನಿಗೆ 'ಅಕ್ಷಯ್, ಬೆಳಿಗ್ಗೆ ಕಾಫಿ–ತಿಂಡಿ–ಅಡುಗೆ, ನಿಮ್ಮಪ್ಪನ ಸೇವೆ ಇದಿಷ್ಟೇ ನನ್ನ ಬದುಕಾ?' ಎಂದಳು.

ಎಕನಾಮಿಕ್ ಟೈಮ್ಸ್‌ನಲ್ಲಿ ಮುಖ ಹುದುಗಿಸಿದ್ದ ಅಕ್ಷಯ್, ಅಮ್ಮನ ಮಾತಿಗೆ ಅಚ್ಚರಿ ಎಂಬಂತೆ ತಲೆಯೆತ್ತಿದ. 'ಹಾಗಂತ ಯಾರು ಅಂದವರು? ನಿನಗೆ ಬೇಕಾದಂತೆ ಬದುಕು. ದುಡ್ಡು ಏನಾದ್ರೂ ಬೇಕಾ ಹೇಳು, ಟ್ರಾನ್ಸ್‌ಫರ್ ಮಾಡ್ತೀನಿ'.

'ಹೂ, ಅದೊಂದು ಬಿಟ್ಟು ಇನ್ನೇನು ಕೊಡಬಲ್ಲೆ ನೀನು?' ತಣ್ಣಗಿನ ದನಿ.

'ಚಿಕ್ಕಂದಿನಿಂದ ಏನೇನೋ ಆಸೆ, ಓದಬೇಕು ನನಗಿಷ್ಟದಂತೆ ಮಾಡಬೇಕು ಹೀಗೆ ಏನೇನೋ, ಆದ್ರೆ ಆಗಲಿಲ್ಲ. ನಿನ್ನ ಹೆಂಡ್ತಿ ನೋಡು, ಟ್ರೆಕಿಂಗ್ ಅಂತ ಹೋಗ್ತಿರ್ತಾಳೆ. ಜೊತೆಗಿದ್ರು ಹೋಗೋಳು, ಇಲ್ಲದಿದ್ರು ಹೋಗೋಳು. ನೀನೂ ಅಷ್ಟೇ, ನಿನಗಿಷ್ಟದ ಸೈಕ್ಲಿಂಗ್ ಹೋಗ್ತಿ ಬರ್ತಿ. ನಮ್ಮ ಕಾಲ ಹಾಗಿರಲಿಲ್ಲ. ಮನೆ ಮಕ್ಕಳು ಅಂತ ಜೀವನ ಸವೆಸಿದ್ದೇ ಆಯ್ತು. ಕೊನೆಗಾಲದಲ್ಲಿ ಮಾಡುವ ಲಿಸ್ಟ್ ಬಹಳಷ್ಟಿವೆ, ಈಡೇರಿಸಿಕೊಳ್ಳಲು. ರಿಟೈರ್ಡ್ ಆಯ್ತು, ನೀವು ಸೆಟ್ಲ್ ಆದ್ರಿ, ಆದ್ರೆ ಈಗ ನಿಮ್ಮಪ್ಪನ್ನ ನೋಡು, ಅಲ್ಝೈಮರ್. ಬಿಟ್ಟು ಎಲ್ಲೂ ಕದಲುವ ಹಾಗಿಲ್ಲ.

ಎಲ್ಲವನ್ನು ಸೆರಗನ್ನು ಬೀಸುವಂತೆ ಒದರಿ ಹೋಗಲು ಸಾಧ್ಯವಾಗಿದ್ರೆ ಅಂತ ಸಾವಿರ ಸಲ ಅನ್ನಿಸಿದೆ. ಈ ವಯಸ್ಸಿಗೆ ನಿಂದೇನು ಶೋಕಿ? ರಾಮ–ಕೃಷ್ಣ ಅಂತ ಇರಬಾರದೆ ಅಂತಾರೆ ಕೇಳಿದವರು. ಹಾಗೇ ಬದುಕಬೇಕು ಅಂತ ನನಗನ್ನಿಸ್ತಾ ಇಲ್ಲ. ಮುದಿತನದ ನಿಯಮಗಳನ್ನು ಯಾರು ಮಾಡಿದ್ದು? ನಾವಾ? ಸಮಾಜವಾ? ಯಾರು?'

ಮಗ ಕಣ್ಣರಳಿಸಿ ಕೇಳುತ್ತಲೇ ಇದ್ದ. ಮುಂದುವರೆದು, 'ನಂಬಿಕೆಯೆಂಬ ಬೆಂಕಿ ಹಲ್ಲುಗಳಲ್ಲಿ ಸಿಕ್ಕಿಹಾಕಿಕೊಂಡಿದೆ, ಮನುಷ್ಯರು ಬೆಂಕಿಯ ಹಲ್ಲುಗಳಲ್ಲಿ ಸಿಕ್ಕಿಬಿದ್ದಿದ್ದಾರೆ– ಗುಲ್ಜಾರ್...' ಮತ್ಯಾವ ಮಾತು ಬೇಡವಾಗಿ ಪರಿಹಾರ ಕಾಣದ ತನ್ನ ನೋವನ್ನು ಮಳೆಯ ಹನಿಯಾಗಿಸಿ ಹೊರಟು ಹೋದಳು.

ಮುಂದಿನ ವಾರದಲ್ಲಿ 'ಅಮ್ಮ ಅಡುಗೆಗೆ ಇವರು ಬರ್ತಾರೆ, ಅಪ್ಪನನ್ನು ನೋಡಿಕೊಳ್ಳಲು ಕೇರ್ ಟೇಕರ್ ಇವರು' ಎಂದು ಮಗ ಪರಿಚಯಿಸಿದಾಗ, ಸುಮತಿಗೆ ತಾನೆಲ್ಲೋ ತುಂಬಾ ಖಾರವಾಗಿಯೇ ಮಗನೊಂದಿಗೆ ಮಾತನಾಡಿದೆನಾ ಅನ್ನಿಸಿದ್ದು ಹೌದಾದರೂ, ಪರಿಹಾರ ಇಷ್ಟು ಬೇಗ ಸಿಕ್ಕಿದ್ದು ಅಚ್ಚರಿಯಾಯಿತು.

'ಇವರಿಗೆಲ್ಲಾ ಹಣ ಕೊಡೋದು ನಿನಗೆ ಹೊರೆಯಾಯ್ತಾ....' ಮಾತು ತುಂಡರಿಸಿ, 'ದುಡೀತಿರೋದೋ ನಮಗಲ್ವಾ? ನೀವು ಹೇಗೆ ಬೇರೆ ಆಗ್ತಿರಾ? ಅಮ್ಮ... ಪ್ರತೀ ಸಮಸ್ಯೆಗೂ ಪರಿಹಾರ ಅನ್ನೋದು ಇದೆ. ಅದಕ್ಕೆ ದುಡ್ಡಿನ ಮುಖ ನೋಡಬೇಡ. ನನಗೆ ನಿನ್ನ ಮನಸ್ಸಿನ ತೊಳಲಾಟ ಅರ್ಥ ಆಗಿರಲಿಲ್ಲ. ಇನ್ನು ಕೆಲವು ವರ್ಷವಾದರೂ ನೀನು ನಿನಗಾಗಿ ಬದುಕು. ಇದೇ ಇವತ್ತಿನ ನಿನ್ನ ಬರ್ತಡೇ ಗಿಫ್ಟ್' ಎಂದು ಮಗ ತಬ್ಬಿ ಮುತ್ತಿಟ್ಟ. ಅವಳಿಗೆ ತನ್ನ ಹುಟ್ಟಿದ ದಿನವೂ ಮರೆತುಹೋಗಿತ್ತು. ಜ್ಞಾಪಿಸಿದ ಮಗನನ್ನು ಅಚ್ಚರಿಯಿಂದ ಕಣ್ಣರಳಿಸಿ ನೋಡಿದಳು.

ಬನ್ನಿ ಎಲ್ಲ
ಮೈತುಂಬ ಕನ್ನಡಿಗಳ ಧರಿಸೋಣ
ಜನರಿಗೆ ನಮ್ಮೊಳಗೆ ತಮ್ಮನ್ನೇ ಕಂಡು
ಖುಷಿಯಾಗಬಹುದು ಸ್ವಲ್ಪವಾದರೂ

–ಗುಲ್ಜಾರ್

ಪ್ರತಿಕ್ರಿಯಿಸಿ: feedback@sudha.co.in